ಕಡೆ ಐಸಿಸಿ ಸಭೆ ನಿರ್ಣಯವಾಗಿದ್ದರೂ ಕೂಡ ಫೆಬ್ರುವರಿಯಲ್ಲಾಗಲೀ, ಮಾರ್ಚ್‌ನಲ್ಲಾಗಲೀ ಆ ಹೆಚ್‌ಎಲ್‌ಬಿಸಿ ತುಮಕೂರಿನಲ್ಲಿ ನೀರನ್ನು ಹರಿಸಲೇ ಇಲ್ಲ. ತಾವುಗಳು ನಾಲೆಯಲ್ಲಿ ನೀರು ಹರಿಸಿ ಈಚನೂರು ಕೆರೆಯನ್ನು ತುಂಬುತ್ತೀರಾ? ಬುಗುಟನಹಳ್ಳಿ ಕೆರೆಯನ್ನು ತುಂಬುತ್ತೀರಾ ಅಥವಾ ಹೀಗೆಯೇ ತಿಪಟೂರು, ಅರಸೀಕೆರೆ, ತುಮಕೂರುಗಳಿಗೆ ಈ ನೀರಿನ ಆತಂಕವನ್ನು ಮುಂದುವರಿಸಿಕೊಂಡು ಹೋಗಲು ತಾವುಗಳು ಸುಮ್ಮನೆ ಕುಳಿತುಕೊಂಡು ನೋಡುತ್ತೀರಾ ಎಂದು ಹೇಳಿ ಪ್ರಸ್ತಾವ ಮಾಡಲು ಬಯಸುತ್ತೇನೆ. ಈಗ ತಿಪಟೂರಿನಲ್ಲಿ ಬಹಳ ಕಷ್ಟದ ಪರಿಸ್ಥಿತಿ ಇದೆ. ತತ್‌ಕ್ಷಣ ಆ ಕೆರೆಗೆ ನೀರು ತುಂಬಿದರೆ ಅದನ್ನು ಪಂಪ್ ಮಾಡಲು ಮೂರು ತಿಂಗಳು ತೆಗೆದುಕೊಳ್ಳುತ್ತದೆ. ನಾಳೆಯಿಂದ ನೀರು ಹೊರಟ ತತ್‌ಕ್ಷಣ ಪಂಪ್ ಮಾಡಿದರೆ ಕೆರೆ ತುಂಬಲು ಮೂರು ತಿಂಗಳು ಬೇಕಾಗುತ್ತದೆ. ಆದ್ದರಿಂದ ಇವೊತ್ತು ಬಿಟ್ಟು ಇನ್ನು ಮೂರು ತಿಂಗಳೊಳಗಾಗಿಯಾದರೂ ಆ ಕೆರೆಗೆ ನೀರು ಹರಿಸುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಎಂ.ಪಿ. ನಾಣಯ್ಯ:- ಮಾನ್ಯ ಅಧ್ಯಕ್ಷರೇ, ಇದು ನೀರಾವರಿ ಮತ್ತು ನಗರಾಭಿವೃದ್ಧಿ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಇಲಾಖೆಗಳಿಂದ ವರದಿಯನ್ನು ತರಿಸಿ ಸೋಮವಾರದಂದು ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ, ನಾನು ಹುಬ್ಬಳ್ಳಿ ಗೋಲಿಬಾರ್ ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಕೋರಿದ್ದೆ.

ಅಧ್ಯಕ್ಷರು:- ಅದೇ ವಿಷಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಅವಕಾಶ ಕೋರಿರುವುದರಿಂದ ಮೊದಲು ಅವರು ಪ್ರಸ್ತಾಪ ಮಾಡುತ್ತಾರೆ. ಅನಂತರ ತಾವು ಪ್ರಸ್ತಾಪಿಸಬಹುದು. The first priority will go to the Leader of opposition. He has also sought permission. ಅವರದ್ದು ಆದ ಮೇಲೆ ತಮಗೆ ಅವಕಾಶ ಕೊಡುತ್ತೇನೆ. ವಾಟಾಳ್‌ರವರಿಗೂ ಕೂಡ ಆ ಮೇಲೆ ಅವಕಾಶ ಕೊಡುತ್ತೇನೆ.

(ಎ) ಹುಬ್ಬಳ್ಳಿಯಲ್ಲಿ 17.3.98ರಂದು ಹೋಳಿ ಹಬ್ಬದ ವಿಚಾರಣೆಯಲ್ಲಿ ನಡೆದ ಘಟನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- (ವಿರೋಧ ಪಕ್ಷದ ನಾಯಕರು) ಸನ್ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ದಿನಾಂಕ 17-3-98ರಂದು ಸುಮಾರು ಎರಡೂವರೆ ಗಂಟೆಗೆ ಹೋಳಿ ಹಬ್ಬವನ್ನು ಆಚರಣೆ ಮಾಡಿ ಮೆರವಣಿಗೆಯನ್ನು ತೆಗೆದುಕೊಂಡು ಹೋಗುವಾಗ ಅಲ್ಲಿ ನಡೆದಂಥ ಘಟನೆ ಮತ್ತು ಆ ಎಂದು ಮೆರವಣಿಗೆಯ ಮೇಲೆ ಕಲ್ಲೆಸೆದರು ಎಂಬ ಕಾರಣದಿಂದ ಹುಬ್ಬಳ್ಳಿಯಲ್ಲಿರತಕ್ಕಂಥ ಗಾಂಧಿಮಾರ್ಕೆಟ್‌ನಲ್ಲಿ ಇರತಕ್ಕಂಥ 25 ಅಂಗಡಿಗಳು ಸುಟ್ಟು ಹೋಗಿದೆ. ಮತ್ತು ಹುಬ್ಬಳ್ಳಿಯ ಸೆನ್ಸಿಟೀವ್ ಸ್ಥಳಗಳಾದಂಥ ಮಲ್ಲಾಬಾಡ, ಕಮರಿಪೇಟೆ, ಡಾಕಪ್ಪ ಸರ್ಕಲ್, ಕೌಲ್‌ಪೇಟೆ, ಈ ಎಲ್ಲಾ ಭಾಗಗಳಿಂದ ಹೋಳಿ ಮೆರವಣಿಗೆಯು ಹೊರಟು ಡಾಕಪ್ಪ ಸರ್ಕಲ್‌ಗೆ ಬಂದಾಗ ಈ ಘಟನೆಯು ನಡೆಯಿತು ಎಂಬ ಬಗ್ಗೆ ನಮಗೆ ಇವೊತ್ತು ಒಂದು ವರದಿಯು ಬಂದಿದೆ. ಪತ್ರಿಕೆಗಳಲ್ಲಿಯೂ ಕೂಡ ನಾವೆಲ್ಲರೂ ಓದಿದ್ದೇವೆ. ಈ ಒಂದು ಘಟನೆಯಿಂದ ಪುನಃ ಹುಬ್ಬಳ್ಳಿಯಲ್ಲಿ ಟೆನ್ಸ್ ಸಿಚ್ಯುವೇಶನ್ ಇದೆ. ಈ ವಾತಾವರಣ ಅಲ್ಲಿ ಪದೇ ಪದೇ ಆಗುತ್ತಾ ಇದೆ. ಇತ್ತೀಚೆಗೆ 2-3ವರ್ಷಗಳಿಂದ ಅಲ್ಲಿ ಶಾಂತಿ ಇತ್ತು. ಮತ್ತು ಪುನಃ ಹೋಳಿ ಸಂದರ್ಭದಲ್ಲಿ

ಈ ಘಟನೆಯು ಅಲ್ಲಿ ನಡೆದಿದೆ. ಆದರಿಂದಾಗಿ ಅಲ್ಲಿ ಪೋಲೀಸರು ಫೈರಿಂಗ್ ಮಾಡಿದ್ದರಿಂದ 4 ಜನರು ಫೈರಿಂಗ್‌ಗೆ ಒಳಗಾಗಿದ್ದಾರೆ. ಆದರಲ್ಲಿ ಮೂರು ಜನರು ಜಖಂ ಆಗಿದ್ದು ಒಬ್ಬರು ಬಹಳ ಸೀರಿಯಸ್ ಆಗಿದ್ದಾರೆ. ಆ ಸ್ಥಿತಿಯಲ್ಲಿ ಅವರು ಇವೊತ್ತು ಬೆಳಗಾಂಗೆ ಶಿಫ್ಟ್ ಮಾಡಿದ್ದಾರೆ. ಅಂದರೆ ಅದರ ಅರ್ಥ ಅವನು ಬಹಳ ಸೀರಿಯಸ್ ಆಗಿದ್ದಾನೆ, ಬದುಕುತ್ತಾನೋ ಇಲ್ಲವೋ ಗೊತ್ತಿಲ್ಲ. ಬಹುಶಃ ಏನಾದರೂ ಒಂದು ಅನಾಹುತವಾದರೆ ಹುಬ್ಬಳ್ಳಿಯಲ್ಲಿ ಮತ್ತೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ ಬೆಳಗಾವಿಗೆ ಅವರನ್ನು ಶಿಫ್ಟ್ ಮಾಡಿರಬಹುದೆಂದು ನಾನು ತಿಳಿದವುಕೋಂಡಿದ್ದೇನೆ. ಈ ಘಟನೆಗಳು ಏಕೆ ಪದೇ ಪದೇ ನಡೆಯುತ್ತಿವೆ ಎಂಬ ಬಗ್ಗೆ ಸರಕಾರವು ಚಿಂತನೆ ಮಾಡಬೇಕಾಗಿತ್ತು. ಒಂದೆರಡು ವರ್ಷಗಳಲ್ಲಿ ಅಲ್ಲಿ ಶಾಂತಿ ಇತ್ತು ಎಂದು ಬಹಳಷ್ಟು ಶಹಭಾಶ್‌ಗಿರಿಯನ್ನು ತೆಗೆದುಕೊಂಡಿದ್ದೇವೆ. ಆದರೆ ಹೋಳಿ ಸಂದರ್ಭದಲ್ಲಿ ಇಂಥ ಘಟನೆಗಳು ಕೆಲವು ಭಾಗಗಳಲ್ಲಿ ಯಾವಾಗಲೂ ನಡೆಯತ್ತಿರುತ್ತದೆ. ಯಾವ ಭಾಗದಲ್ಲಿ ಇಂಥ ಘಟನೆಗಳು ನಡೆಯುತ್ತವೆ ಅಲ್ಲಿ ಪ್ರಿಕಾಷನರಿ ಮೆಷರ್ಸ್ ತೆಗೆದುಕೊಳ್ಳಬೇಕಾದುದು ಸರಕಾರದ ಕರ್ತವ್ಯ. ಪೋಲೀಸರು ಕರ್ತವ್ಯವಾಗಿರುತ್ತದೆ. ಉದಾಹರಣೆಗಾಗಿ ಹೋಳಿ ಸಂದರ್ಭದಲ್ಲಿ ಯಾವಾಗಲೂ ಗುಲ್ಬರ್ಗ, ಹುಬ್ಬಳ್ಳಿ-ಧಾರವಾಡ, ಬೆಳಗಾಂನಲ್ಲಿ ಗಲಭೆಗಳು ನಡೆಯುತ್ತವೆ. ಇಂಥ ಕೆಲವು ಸೆನ್ಸಿಟಿವ್ ಏರಿಯಾಗಳು ಇವೆ. ಗಣಪತಿ ಹಬ್ಬದ ಸಂದರ್ಭದಲ್ಲಿ ಕೂಡ ಶಿವಮೊಗ್ಗ, ಹುಬ್ಬಳ್ಳಿ-ಧಾರವಾಡ ಬೆಳಗಾಂ, ಗುಲ್ಬರ್ಗಗಳಲ್ಲಿ ಗಲಭೆಗಳು ನಡೆಯ ಬಹುದಾದ ಸ್ಥಳಗಳಾಗಿವೆ. ಇಲ್ಲಿ ನಾವು ಯಾವಾಗಲೂ ಕೂಡ ಇಂಥ ಹಬ್ಬಗಳನ್ನು ಆಚರಿಸುವಾಗ, ಸರಕಾರವು ಹೆಚ್ಚಿನ ಜಾಗ್ರತೆಯಿಂದ ಕೆಲಸವನ್ನು ಮಾಡಿತಕ್ಕಂಥಾದ್ದು ಅವರ ಕರ್ತವ್ಯ. ಆದರೆ ಇವೊತ್ತು ಹುಬ್ಬಳ್ಳಿ ವಿಚಾರದಲ್ಲಿ ಏಕೆ ಲೋಪವಾಯಿತು ಎಂದು ನನಗೆ ಗೊತ್ತಾಗುತ್ತಿಲ್ಲ. ನಿಮಗೆ ಹುಬ್ಬಳ್ಳಿಯಲ್ಲಿ ಯಾವಾಗಲೂ ಕೂಡ ಇಂಥ ಘಟನೆಗಳು ನಡೆಯುವುದು ಸಾಮಾನ್ಯ ಎಂದು ಗೊತ್ತಿದೆ. ಇವೊತ್ತು ಮಕ್ಕಳ ಎಕ್ಸಾಮಿನೇಷನ್ ನಡೆಯುತ್ತಾ ಇದೆ. 7ನೇ ತರಗತಿಗೆ ಪರೀಕ್ಷೆ ನಡೆಯುತ್ತಿದ್ದು ಘಟನೆ ನಡೆದಂಥ ಸ್ಥಳದ ಹತ್ತಿರವೇ ಸ್ಕೂಲ್ ಇದೆ. ತಮ್ಮ ಮಕ್ಕಳನ್ನು ಉಳಿಸಿಕೊಳ್ಳಬೇಕೆಂದು ಅನೇಕ ತಂದೆತಾಯಿಗಳು ಅಲ್ಲಿಗೆ ಧಾವಿಸಿ ಹೋದ ಮೇಲೆ ಪರಿಸ್ಥಿತಿಯು ಇನ್ನೂ ಗಂಭೀರವಾಯಿತು. ಇದರ ಹಿಂದೆಯೂ ಕೂಡ ಸಜೆಸ್ಟ್ ಮಾಡಿದ್ದರು ಎಂದು ಗೊತ್ತಾಗಿದೆ. ಯಾವಾಗ ಹೋಳಿ ಇರುತ್ತದೆ, ಅದನ್ನು ಆಚರಿಸುವಾಗ, ಮೆರವಣಿಗೆ ಹೋಗುವಾಗ ಆ ದಿನ ಎಕ್ಸಾಮಿನೇಷನ್ ಇರಬಾರದು ಅಂಥ ಎಕ್ಸಾಮಿನೇಷನ್‌ನ್ನು ಮುಂದೆ ಹಾಕಿ ಎಂದು ಅಲ್ಲಿನ ಜನರು ಕೇಳಿಕೊಂಡಿದ್ದರೂ ಕೂಡ ಎಕ್ಸಾಮಿನೇಷನ್‌ಗಳನ್ನು ಮುಂದಕ್ಕೆ ಹಾಕಿಲ್ಲ. ಅಲ್ಲಿ ಉರ್ದು ಮಿಡ್ಲ್‌ಸ್ಕೂಲ್ ಇದ್ದು ಸುಮಾರು ಎರಡು ಸಾವಿರ ವಿದ್ಯಾರ್ಥಿಗಳು ಎಕ್ಸಾಮಿನೇಷನ್‌ಗಳಿಗೆ ಅಟೆಂಡ್ ಆಗುತ್ತಿದ್ದಾರೆ. 7,8,9,ನೇ ತರಗತಿ ಪರೀಕ್ಷೆಗೆ ಹೋಗತಕ್ಕಂಥ ವಿದ್ಯಾರ್ಥಿಗಳು ಅಲ್ಲಿ ಬಹುಸಂಖ್ಯಾತರು ಇದ್ದ ಕಾರಣ ಇವೊತ್ತಿನ ದಿನ ತಮಗೆ ಗೊತ್ತಿರುವ ಹಾಗೆ ಗರ್ಲ್ಸ್‌ಸ್ಕೂಲ್ ಇರತಕ್ಕಂಥ ಜಾಗದಲ್ಲಿ ಈ ವಿದ್ಯಾರ್ಥಿಗಳನ್ನು ಕೂಡ ಅಡ್ಡ ಹಾಕಿರುತ್ತಾರೆ. ಅದರಲ್ಲಿಯೂ ಈ ಮೆರವಣಿಗೆ ಹೋಗುವ ಕಾಲದಲ್ಲಿ ಒಬ್ಬರಿಗೊಬ್ಬರು ಟೀಸ್ ಮಾಡತಕ್ಕಂಥಾದ್ದು

12.40. ಪಿ.ಎಂ.

ಚುಡಾಯಿಸತಕ್ಕಂಥಾದ್ದು ಆಗುತ್ತದೆ. ಇದನ್ನು ತಿಳಿದುಕೊಂಡು ಅಲ್ಲಿನ ಪೋಲೀಸ್ ಅಧಿಕಾರಿಗಳು ವರ್ತನೆ ಮಾಡಿದ್ದರೆ ಅಥವಾ ಹೆಚ್ಚಿನ ಪೋಲೀಸ್ ಫೋರ್ಸನ್ನು ತೆಗೆದುಕೊಂಡು ಹೋಗಿದ್ದರೆ

ಬಹುಶಃ ಅಲ್ಲಿ ಆಗಿರತಕ್ಕಂತಹ ಫೈರಿಂಗ್ ಅನ್ನು ನಾವು ತಡೆಗಟ್ಟಬಹುದಿತ್ತು. 25 ಅಂಗಡಿಗಳು ಏನು ಸುಟ್ಟಿದೆ ಅದು ಷಾರ್ಟ್‌ಸರ್ಕ್ಯೂಟಿನಿಂದಾಗಿದೆ ಯಾರೂ ಬೆಂಕಿ ಹಚ್ಚಿಲ್ಲವೆಂದು ಕಾರಣ ಕೊಡುತ್ತಿದ್ದಾರೆ. ಮುನಿಸಿಪಾಲಿಟಿ ವತಿಯಿಂದ ಸಣ್ಣಪುಟ್ಟ ಅಂಗಡಿಗಳನ್ನು ಕಟ್ಟಿಸಿದ್ದಾರೆ. ಇಂತಹ ಘಟನೆಗಳು ಇದೊಂದೇ ಸಲ ಅಲ್ಲ ಕೋಮು ಗಲಭೆಯಾದಾಗ ಕೂಡ ಇಂತಹ ಅಂಗಡಿಗಳು ಆಹುಮತಿಯಾಗಿರತಕ್ಕಂಥಾದ್ದು ಇದೆ. ಸರಕಾರಕ್ಕೆ ಇದು ಗೊತ್ತಿದ್ದರೂ ಕೂಡ ಇಂತಹ ಹಬ್ಬಗಳನ್ನು ಆಚರಣೆ ಮಾಡುವಾಗ ತೊಂದರೆಯಾಗುತ್ತದೆಂಬ ಅರಿವು ಇದ್ದರೂ ಸರಕಾರ ಏತಕ್ಕೆ ತಡೆಗಟ್ಟುವ ಬಗ್ಗೆ ಕ್ರಮವನ್ನು ಜರುಗಿಸಿಲ್ಲ. ಇದರಲ್ಲಿ ಸರಕಾರ ವಿಫಲಗೋಂಡಿದೆ ಎಂಬ ಮಾತನ್ನು ನಾನು ಹೇಳಬೇಕಾಗಿದೆ. ಇದರ ಬಗ್ಗೆ ವಿಸ್ತಾರವಾಗಿ ಹೇಳಿಕೆಯನ್ನು ಕೊಡಬೇಕು. ಅಲ್ಲಿ ಯಾರ ಅಂಗಡಿಗಳು ಸುಟ್ಟು ಹೋಗಿದೆ ಅವರಿಗೆ ಪರಿಹಾರ ಕೋಡಬೇಕು. ಪೋಲೀಸ್ ಫೈರಿಂಗ್‌ನಲ್ಲಿ ಶ್ರೀಮಾನ್ ಫರೂಕ್ ಸಾಬ್, ಮಹಮದ್ ಇರ್‌ಫಾನ್‌ಅಜಾದ್ ಸಾಬ್ ಮತ್ತು ಎಂ.ಡಿ. ಮುಲ್ಲ ಎಂಬ ಪೋಲೀಸರಿಗೆ ಗಾಯವಾಗಿದೆ. ಇವರಿಗೂ ಕೂಡ ಪರಿಹಾರ ಕೊಡಬೇಕು. 38 ಪೋಲೀಸರಿಗೆ ಕೂಡ ಗಾಯವಾಗಿದೆ ಎಂಬ ವರದಿ ಇದೆ. 14 ಸಾಮಾನ್ಯ ಜನರಿಗೆ ಗಾಯಗಳಾಗಿದೆ. ಫೈರಿಂಗ್‌ನಲ್ಲಿ ಗಾಯಗೊಂಡವರು ಈ ಮೊದಲು 4 ಜನರ ಹೆಸರನ್ನು ಏನು ನಾನು ಹೇಳಿದ್ದೇನೆ ಅವರಿಗೂ ಕೂಡ ಪರಿಹಾರ ಕೋಡಬೇಕು. ಯಾರು ನಿರಪರಾಧಿಗಳ ಅಂಗಡಿಗಳಿಗೆ ಕೆಲವು ಕಿಡಿಗೇಡಿಗಳು ಬೆಂಕಿ ಹಚ್ಚಿ ಅವರ ಆಸ್ತಿ ಪಾಸ್ತಿಯನ್ನು ಲೂಟಿ ಮಾಡತಕ್ಕಂತಹ ಕೃತ್ಯಗಳೇನು ನಡೆದಿದೆ ಅವರಿಗೆ ಅನುಕೂಲ ಮಾಡಿಕೊಡಬೇಕು. ಇಂತಹ ಪ್ರಕರಣಗಳು ಮಡಕೇರಿ, ಮೈಸೂರಿನಲ್ಲಿ ಗುಲ್ಬರ್ಗದಲ್ಲಿ ಆಗಿರಬಹುದು ಆಗ ಸರಕಾರ ಅವರಿಗೆ ಪರಿಹಾರಕೊಟ್ಟಿದೆ ಅದೇ ರೀತಿ ಇವರಿಗೂ ಕೊಡಬೇಕು. ತಾವು ಪರಿಹಾರದ ಬಗ್ಗೆ ಹೇಳಬೇಕು. ಯಾರಿಗೆ ಫೈರಿಂಗ್‌ನಲ್ಲಿ ತೊಂದರೆಯಾಗಿದೆ ಅವರಿಗೆ ಕೂಡ ಸಹಾಯ ಮಾಡುತ್ತೇವೆಂದು ಹೇಳಬೇಕು. ಇಂತಹ ಹೋಲಿ ಪ್ರೊಸೆಷನ್‌ನಲ್ಲಿ ಘಟನೆಗಳು ನಡೆಯುತ್ತವೆಂದು ಗೊತ್ತಿದ್ದರೂ ಕೂಡ ಮುನ್ನೆಚ್ಚರಿಕೆ ತೆಗೆದುಕೊಳ್ಳದೆ ಮೈಮರೆತು ಯಾವ ಪೋಲೀಸ್ ಅಧಿಕಾರಿಗಳು ಕುಳಿತಿದ್ದಾರೆ ಅವರ ಮೇಲೂ ಕೂಡ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದರ ಬಗ್ಗೆ ಒಂದು ವಿಸ್ತಾರವಾದ ಹೇಳಿಕೆಯನ್ನು ಕೊಡಬೇಕು ಎಂದು ವಿನಂತಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯಲ್ಲಿ ನಡೆದಿರತಕ್ಕಂತಹ ಹಿಂಸಾಚಾರ ಕೃತ್ಯ ಕರ್ಫ್ಯೂ ಕಂಡಲ್ಲಿ ಗುಂಡು ಎಂಬಂತೆ ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ನಮ್ಮ ಸರಕಾರ ಯಾರಿಗೂ ಗುಂಡು ಹಾರಿಸುವುದಿಲ್ಲ ಗೋಲೀಬಾರ್ ಮಾಡುವುದಿಲ್ಲ ನಮ್ಮ ಸರಕಾರದ ನೀತಿ ನಿರ್ಧಾರ ಇದಾಗಿದೆ ಎಂದು ಹೇಳಿದರು. ಸುಮಾರು 8 ಬಾರಿ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಈ ನೀತಿಯನ್ನು ನೋಡಿದಾಗ ಸರಕಾರ ಒಂದು ರೀತಿಯಲ್ಲಿ ಅಪಹಾಸ್ಯಕ್ಕೆ ಈಡಾಗುತ್ತಿದೆ. ಇಲ್ಲಿ 3 ಮಂದಿ ಗುಂಡಿನ ಹೊಡೆತದಿಂದ ಗಾಯಗೊಂಡಿದ್ದಾರೆ. ಪೆಟ್ರೋಲ್ ಬಾಂಬುಗಳನ್ನು ಧಾರಾಳವಾಗಿ ಎಸೆದಿದ್ದಾರೆ. ಈ ಬಾಂಬ್ ಎಲ್ಲಿಂದ ಬಂತು? ಇದರ ಶೇಖರಣ ಯಾವ ರೀತಿಯಾಯಿತು? ಎಷ್ಟು ಪ್ರಮಾಣದಲ್ಲಿ ಯಾರ್ಯಾರು ಶೇಖರಣೆ ಮಾಡಿದ್ದರು? ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ಎಂಬುದನ್ನು ತಾವು ಸ್ಪಷ್ಟಪಡಿಸಬೇಕು. ಸುಮಾರು 150 ಮಂದಿ ಗಾಯಗೊಂಡಿದ್ದಾರೆ. ನಿರಂತವಾದ ಒಂದು ಹೋರಾಟ ಒಂದು ರೀತಿಯಲ್ಲಿ ಪೋಲೀಸರಿಗೂ ಸಾರ್ವಜನಿಕರಿಗೂ ಭಯಾನಕವಾದಂತಹ ಯುದ್ಧವೇ ನಡೆದಿದೆ ಎಂದರೆ ತಪ್ಪಾಗಲಾರದು. ಇಂತಹ ಪರಿಸ್ಥಿತಿಯಲ್ಲಿ 35 ಸುತ್ತು ಅಶ್ರುವಾಯು

ಪ್ರಯೋಗ ಮಾಡಿದ್ದಾರೆ. ಕನಿಷ್ಠ 10 ರಿಂದ 12 ಬಾರಿ ಗೋಲೀಬಾರ್ ಮಾಡಿದ್ದಾರೆ. 1994ರಲ್ಲಿ ಇಂತಹ ಪರಿಸ್ಥಿತಿ ನಡೆದು ಆಗ ಗೋಲೀಬಾರಿನಿಂದ 4 ಜನ ಸತ್ತಿದ್ದರು. ಇದೆಲ್ಲ ಗೊತ್ತಿದ್ದರೂ ಕೂಡ ಯಾವುದೇ ಮುಂಜಾಗರೂಕತೆ ವಹಿಸದೇ ಇರುವುದಕ್ಕೆ ಕಾರಣವೇನು ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕೆಂದು ನನ್ನ ಒತ್ತಾಯ. ಇದರ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಲೇಬೇಕು ಎಂಬುದು ನನ್ನ ಕಳಕಳಿಯ ಮನವಿ. 1994ರಲ್ಲಿ ನಡೆದಂತಹ ಹಿಂಸಾಚಾರ ಪೋಲೀಸರಿಗೆ ಗೊತ್ತಿದೆ ಇದು ಮತ್ತೆ ಮರುಕಳಿಸುವುದಕ್ಕೆ ಮೊದಲೇ ಅವರು ಎಚ್ಚರಿಕೆ ವಹಿಸಬಹುದಾಗಿತ್ತು. 3-4 ಗಂಟೆಯವರೆಗೆ ಕಾಮನ ಹಬ್ಬದ ಮೆರವಣಿಗೆ ನಡೆದು ಬಣ್ಣ ಚೆಲ್ಲಿದ ನಂತರ ಕೊನೆಯಲ್ಲಿ ಯಾರೋ 4-5 ಕಲ್ಲುಗಳನ್ನು ತೀರಿದರು, ಅದು ಎಲ್ಲಿಂದ ಬಂತು, ಅದನ್ನು ತೂರಿದಂತಹವರು ಯಾರು, ಇದರ ಹಿನ್ನೆಲೆ ಏನು? ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು. ಚಿಂತಾಜನಿಕ ಸ್ಥಿತಿಯಲ್ಲಿರತಕ್ಕಂತಹ ವ್ಯಕ್ತಿಯ ಬಗ್ಗೆ ತಾವೇನು ಗಮನಹರಿಸಿದ್ದೀರಿ ಎಂಬುದನ್ನು ತಿಳಿಸಬೇಕು. ಸಾವಿಗಿಂತ ನೋವನ್ನು ಜಾಸ್ತಿ ಅನುಭವಿಸಿದ್ದಾರೆ, ಅದಕ್ಕೆ ಪರಿಹಾರ ಕೊಡಬೇಕು. ನಿರಂತರವಾಗಿ ಲೂಟಿ ನಡೆದಿದೆ ಇಡೀ ಹುಬ್ಬಳ್ಳಿಯಲ್ಲಿ ಸ್ಮಶಾನ ಮೌನ ಆವರಿಸಿದೆ. ಜನರು ಅಲ್ಲಿ ಭಯ ಭೀತಿಯಿಂದ ಓಡಾಡತಕ್ಕಂತಹ ಪರಿಸ್ಥಿತಿ ಇದೆ. ಹುಬ್ಬಳ್ಳಿ ನಗರವೇ ಮಿಲಿಟರಿ ಪೋಲೀಸರ ಪ್ರಭುತ್ವವೋ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಂಗಳೂರಿನಿಂದ 20 ಕಿಲೋ ಮೀಟರ್ ದೂರದಲ್ಲಿ ಹೆಬ್ಬಗೋಡು ವಾಡಿಯಲ್ಲಿ ನಡೆದಿರುವಂತಹ ಸ್ಫೋಟಕದಿಂದ 6 ಮಂದಿ ಸತ್ತಿದ್ದಾರೆ. ಇದಕ್ಕೆ ಕಾರಣವೇನು? ಏತಕ್ಕೋಸ್ಕರ ಅಲ್ಲಿ ಇದನ್ನು ಇಟ್ಟಿದ್ದರು? ಇದರ ಹಿಂದೆ ಇರತಕ್ಕಂತಹ ಪಿತೂರಿ ಏನು? ಇದರಲ್ಲಿ ಯಾರ್ಯಾರ ಕೈವಾಡ ಇದೆ ಎಂಬ ಬಗ್ಗೆ ಪ್ರಾಮಾಣಿಕವಾಗಿ ತನಿಖೆ ನಡೆಸಿದ ಅದರ ವರದಿಯನ್ನು ಸದನವು ಮುಂದಿಡಬೇಕು. ಇದರ ಹಿನ್ನೆಲೆ ಏನು ಎಂಬುದನ್ನು ಪತ್ತೆ ಮಾಡಬೇಕು. ಆ ಸ್ಫೋಟಕ ಸಿಡಿಯಬೇಕಾದರೆ ಕಾರಣವೇನು ಎಂಬುದನ್ನು ವಿಚಾರ ಮಾಡಿ. ಹುಬ್ಬಳ್ಳಿ ಬಗ್ಗೆ ಸಮಗ್ರ ತನಿಖೆಯಾಗಬೇಕೆಂದು ಮತ್ತೊಮ್ಮೆ ಒತ್ತಾಯಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಇಂತಹ ಪರಿಸ್ಥಿತಿ ಈ ರಾಜ್ಯದಲ್ಲಿ ಬಹಳ ಗಂಭೀರವಾಗಿದೆ ಎಂದು ನನ್ನ ಅಭಿಪ್ರಾಯವಾಗಿದೆ ಇದನ್ನು ನಾನು ಪತ್ರಿಕೆಯಲ್ಲಿ ನೋಡಿದೆ. 5-6 ಕಡೆ ಸಾವು ಸ್ಫೋಟಕವಾಗಿದೆ ಎಂಬುದನ್ನು ನಾವೆಲ್ಲರೂ ತಿಳಿದಿದ್ದೇವೆ. ಹುಬ್ಬಳ್ಳಿಯಲ್ಲಿ ಗೋಲೀಬಾರ್ ಮೊನ್ನೆ ನಡೆದಿತ್ತು. ಇದು ಬಹಳ ಸೂಕ್ಷ್ಮ ಪ್ರದೇಶವೆಂದು ತಮಗೆ ಗೊತ್ತಿದೆ. ಮೆರವಣಿಗೆ ಮಾಡತಕ್ಕಂತಹ ಸಂದರ್ಭದಲ್ಲಿ ಆ ಪ್ರದೇಶದಲ್ಲಿರುವ ಜನ ಸರಕಾರವನ್ನು ಮನವಿ ಮಾಡಿಕೊಂಡಿದ್ದಾರೆ. ಮೆರವಣಿಗೆ ಈ ಸಲ ಆ ಓಣಿಯಲ್ಲಿ ಹೋಗುವುದು ಬೇಡ ಅಲ್ಲಿ ಸೂಕ್ಷ್ಮ ಪರಿಸ್ಥಿತಿ ಇದೆ ಇನ್ನೊಂದು ದಾರಿಯಲ್ಲಿ ಹೋಗಬಹುದೆಂಬ ಮನವಿಯನ್ನು ಪೋಲೀಸರಿಗೆ ಅವರು ಮನವಿ ಕೊಟ್ಟಿದ್ದಾರೆ. ಆದರೆ ಅವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆ ಓಣಿಯಲ್ಲಿ ಮೆರವಣಿಗೆಯನ್ನು ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದು ಪೋಲೀಸಿನವರೇ. ಈ ಜವಾಬ್ದಾರಿಯನ್ನು ಅವರೇ ಹೊರಬೇಕಾಗುತ್ತದೆ. ಅಲ್ಲಿ ಸೂಕ್ಷ್ಮ ಪರಿಸ್ಥಿತಿ ಗೊತ್ತಿದ್ದರೂ ಕೂಡ ಪೋಲೀಸ್ ಪಡೆಯನ್ನು ಅಲ್ಲಿಗೆ ರವಾನಿಸಿಲ್ಲ. ವಾಸ್ತವವಾಗಿ ಗಲಭೆ ಪ್ರಾರಂಭವಾದಂತಹ ಸಂದರ್ಭದಲ್ಲಿ ಪೋಲೀಸಿನವರು ಎಷ್ಟು ಜನ ಅಲ್ಲಿ ಇದ್ದರು ಮತ್ತೆ ಮಧ್ಯಾಹ್ನದ ಹೊತ್ತಿಗೆ ಹೆಚ್ಚು ಜನ ಪೋಲೀಸರು ಅಲ್ಲಿಗೆ ಹೋಗಿದ್ದಾರೆ. ಪೋಲೀಸಿನವರು ಮಾಹಿತಿಯನ್ನು ಪಡೆಯುವುದರಲ್ಲಿ ವಿಫಲರಾಗಿದ್ದಾರೆಯೋ ಅಥವಾ ಅವರ ಕರ್ತವ್ಯದಲ್ಲಿ ನಿಷ್ಕ್ರಿಯರಾಗಿದ್ದಾರೆಯೇ ಎಂಬ ಪ್ರಶ್ನೆಗೆ ಸರಕಾರ ಉತ್ತರ ಕೊಡಬೇಕಾಗುತ್ತದೆ. ಅಲ್ಲಿ ಈಗ

ಗೋಲಿಬಾರ್ ಆಗಿದೆ, ಆಸ್ತಿಪಾಸ್ತಿ ನಷ್ಟ ನಿರಂತರವಾಗಿ ಆಗುತ್ತಿದೆ. ಬಹುಶಃ ಈ ಗಲಭೆ ಏತಕ್ಕಾಗಿ ಆಯಿತೋ ಏನೊ ಗೊತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಹೋಳುವುದಾದರೆ "ದೇವರ ಪೂಜೆಯನ್ನು ಗುಡಿಗೆ ಮಾತ್ರ ಸೀಮಿತಗೊಳಿಸಬೇಕೇ ಹೊರತು ಧಾರ್ಮಿಕ ಆಚರಣೆಗಳನ್ನು ಬೀದಿಗೆ ತರಬಾರದು. ಅವುಗಳನ್ನು ಮನೆಯಲ್ಲಿಯೇ ಆಚರಣೆ ಮಾಡಿಕೊಳ್ಳಬೇಕು" ಎನ್ನುವಂತಹ ಒಂದು ಕಾನೂನನ್ನು ತರಲು ಸರ್ಕಾರಕ್ಕೆ ಸಾಧ್ಯವಿದ್ದರೆ ಬಹುಶಃ ಇಂತಹ ಘಟನೆಗಳನ್ನು ತಡೆಗಟ್ಟಬಹುದೇನೊ. ಧಾರ್ಮಿಕ ಆಚರಣೆಯನ್ನು ಬೀದಿಗೆ ತಂದದ್ದೇ ಈ ಪರಿಸ್ಥಿತಿಯ ನಿರ್ಮಾಣಕ್ಕೆ ಕಾರಣವೆನಿಸುತ್ತದೆ. ಈ ಪರಿಸ್ಥಿತಿ ಹುಬ್ಬಳ್ಳಿಯಲ್ಲಿ ಇದೆಯೆಂದು ತಿಳಿದಿದ್ದರೂ ಸರ್ಕಾರ ಮತ್ತು ಪೊಲೀಸ್ ಇಲಾಖೆ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಆ ರೀತಿ ಕ್ರಮ ತೆಗೆದುಕೊಳ್ಳುವಲ್ಲಿ ಯಾವ ಪೊಲೀಸ್ ಅಧಿಕಾರಿ ವಿಫಲವಾಗಿದ್ದಾರೆ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಇಂತಹ ಗಲಭೆಗಳಲ್ಲಿ ಸಾಮಾನ್ಯವಾಗಿ ಬಲಿಪಶುಗಳಾಗುವುದು ಸಾಮಾನ್ಯ ವರ್ಗದ ಬಡ ಜನರೇ ಹೊರತು ಗಲಭೆ ಹುಟ್ಟಿ ಹಾಕಿದವರಾಗಲಿ, ಅಥವಾ ಗಲಭೆಯ ನಾಯಕತ್ವ ವಹಿಸಿದವರಾಗಲಿ ಬಲಿಪಶುಗಳಾಗುವುದಿಲ್ಲ. ಇದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಈ ಪರಿಸ್ಥಿತಿಗೆ ನೇರವಾಗಿ ಪೊಲೀಸರೇ ಕಾರಣ. ಅವರ ಬೇಜವಾಬ್ದಾರಿತನ, ನಿಷ್ಕ್ರೀಯತೆ ಹಾಗೂ ಸಂಬಂಧಪಟ್ಟ ಮಾಹಿತಿಯನ್ನು ಪಡೆಯುವಲ್ಲಿ ವಿಫಲರಾಗಿರುವುದಕ್ಕೆ ಅವರೇ ಜವಾಬ್ದಾರರು. ಯಾರು ಇದಕ್ಕೆ ಜವಾಬ್ದಾರರಾಗಿದ್ದಾರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ಸುಮಾರು ಐದಾರು ವರ್ಷಗಳಿಂದೀಚೆಗೆ ಅಲ್ಲಿನ ಕಾನೂನು ಪರಿಸ್ಥಿತಿ ಬಹಳ ಹದಗೆಟ್ಟಿದೆ. ಅದನ್ನು ಸುಧಾರಿಸಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

+ ಶ್ರೀ ಅಶೋಕ ಕಾಟವೆ:- ಸನ್ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಬಗ್ಗೆ ಹೇಳಬೇಕೆಂದರೆ ಗಲಭೆ ನಡೆದ ದಿನ ನಾನು ಮತ್ತು ನನ್ನ ಸಚಿತ್ರರಾದಂತಹ ಶ್ರೀ ಜಗದೀಶ್ ಶೆಟ್ಟರು ಅಲ್ಲಿಯೇ ಇದ್ದೆವು. ಆ ದಿನ ಮುಂಜಾನೆ ಹತ್ತೂವರೆ ಗಂಟೆಯ ವೇಳೆಯಲ್ಲಿ ಹುಬ್ಬಳ್ಳಿಯ ಪ್ರಮಾಣ ವೈದ್ಯರೂ, ವಕೀಲರೂ ಆದಂತಹ ಡಾ।। ಪಾಟೀಲರ ನೇತೃತ್ವದಲ್ಲಿ ಸದ್ಭಾವನಾ ಯಾತ್ರೆಯೊಂದನ್ನು ವ್ಯವಸ್ಥೆಗೊಳಿಸಿದ್ದೆವು. ಅದರಲ್ಲಿ ಹಿಂದೂ, ಮಸ್ಲಿಂ ಬಾಂಧವರೆಲ್ಲರೂ ಪಾಲ್ಗೊಂಡಿದ್ದರು. ಮಧ್ಯಾಹ್ನ ಸುಮಾರು 3.15 ಅಥವಾ 3.20 ಸಮಯದಲ್ಲಿ ಬಹಳ ಶಾಂತ ರೀತಿಯಿಂದ ಹುಬ್ಬಳ್ಳಿಯಲ್ಲಿ ನಡೆಯುತ್ತಿದ್ದ ಹೋಳಿ ಹಬ್ಬದ ಮೆರವಣಿಗೆಯು ಪೂನಾ-ಬೆಂಗಳೂರು ರಸ್ತೆಯಲ್ಲಿ ಸಂಚರಿಸುತ್ತಿದ್ದಾಗ ಉತ್ಸವದಲ್ಲಿ ಪಾಲ್ಗೊಂಡಿದ್ದ ಸುಮಾರು 500 ರಿಂದ 1000 ಜನರ ಮೇಲೆ ಕಲ್ಲುಗಳನ್ನು ತೂರಿದ್ದಷ್ಟೇ ಅಲ್ಲ ಅಲ್ಲಿದ್ದಂತಹ ಪೋಲೀಸರ ಮೇಲೂ ಕಲ್ಲು ತೂರಾಟ ನಡೆಯಿತುಯ. ಪೊಲೀಸರು ಅಶ್ರವಾಯು ಪ್ರಯೋಗ ಮಾಡಿದರೂ ಸಹ ಅಲ್ಲಿನ ಪರಿಸ್ಥಿತಿ ಹತೋಟಿಗೆ ಬರಲಿಲ್ಲ. ಪೊಲೀಸ್ ಕಮಿಷನರ್ ಮತ್ತು ಇನ್ನಿತರ ಅಧಿಕಾರಿಗಳಿಗೆ ಗಲಭೆಯಲ್ಲಿ ಗಾಯಗಳಾಗಿವೆ. ಕೂಡಲೇ ಡಿಸಿಪಿಯವರು ಹೆಚ್ಚಿನ ಸಿಬ್ಬಂದಿಯನ್ನು ಸ್ಥಳಕ್ಕೆ ಕಳುಹಿಸುವಂತೆ ಆಗ್ರಹಿಸಿದರು. ಈ ರೀತಿಯಾದಂತಹ ಘಟನೆಗಳು ಸುಮಾರು ಎರಡು ವರ್ಷಗಳಿಂದ ಶಾಂತಿಯುತವಾಗಿದ್ದ ಹುಬ್ಬಳ್ಳಿ ನಗರದಲ್ಲಿ ಬೇಕಂತಲೇ ವಿಚ್ಛಿದ್ರಕಾರಕ ಶಕ್ತಿಗಳು ಮಾಡಿರಬಹುದೆಂದು ನನಗನಿಸುತ್ತದೆ. ಹುಬ್ಬಳ್ಳಿಯಲ್ಲಿ ಈ ಮೊದಲು ಈ ರೀತಿಯಾದ ಘಟನೆಗಳು ನಡೆದಿರಲಿಲ್ಲ. ಯಾವುದೋ ಒಂದು ಸ್ಥಳದಿಂದ ದುಷ್ಕರ್ಮಿಗಳು ಬಂದು ಸುಮಾರು ಎರಡು ತಾಸುಗಳ ಕಾಲ ಈ ರೀತಿಯ ಕಲ್ಲು ತೂರಾಟದ ಯುದ್ಧ ನಡೆಸಿದ್ದಾರೆ ಎಂದರೆ ಇದು

ಎಂತಹ ವಿಪರ್ಯಾಸವಲ್ಲವೆ? ಅಲ್ಲಿದ್ದಂತಹ ಜನ ಎಷ್ಟೇ ಕೇಳಿಕೊಂಡರೂ ಪೊಲೀಸರು ಮೈಕ್‌ನಲ್ಲಿ ಕೂಗಿ ಹೇಳಿದರೂ ಅವರು ಸುಮ್ಮನಾಗಲಿಲ್ಲ. ಘಟನೆ ನಡೆದ ಸ್ಥಳದ ಹತ್ತಿರದಲ್ಲಿಯೇ ಇದ್ದಂತಹ ಶಾಲೆಯೊಂದರಲ್ಲಿ ಮಕ್ಕಳಿಗೆ ಪರೀಕ್ಷೆ ನಡೆಯುತ್ತಿತ್ತು. ಭಯಭೀತರಾಗಿದ್ದಂತಹ ಆ ಮಕ್ಕಳನ್ನು ಪೊಲೀಸ್ ಕಮಿಷನರ್ ಮತ್ತು ಐದಾರು ಜನ ಪೋಲೀಸ್ ಆಫೀಸರ್‌ಗಳು ತಮ್ಮ ತಮ್ಮ ವ್ಯಾನ್‌ಗಳಲ್ಲಿ ಕರೆದುಕೊಂಡು ಹೋಗಿ ಅವರ ಪೋಷಕರಿಗೆ ಒಪ್ಪಿಸಿದ್ದಾರೆ. ಸುಮಾರು ಒಂದೂವರೆ ತಾಸಿನವರೆಗೆ ಪೊಲೀಸರು ಯಾರೊಬ್ಬರನ್ನೂ ಹೊಡೆದಿಲ್ಲ. ಈ ರೀತಿ ಘಟನೆಗಳು ಏತಕ್ಕೆ ನಡೆಯುತ್ತವೆ ಎಂಬುದನ್ನು ಸರ್ಕಾರ ವಿಚಾರ ಮಾಡಬೇಕು. ಈ ಬಗ್ಗೆ ಸರ್ಕಾರದಿಂದ ತನಿಖೆಯಾಗಬೇಕು. ಇದರ ಹಿಂದೆ ಯಾರದೋ ಒಂದು ದೊಡ್ಡ ಕೈವಾಡವಿದೆಯೆಂದು ನನಗನಿಸುತ್ತದೆ. ಹುಬ್ಬಳ್ಳಿ ನಗರ ಶಾಂತಿಯುತವಾಗಿರಬಹುದು, ಈ ರೀತಿಯ ವಿಚ್ಛಿದ್ರಕಾರಕ ಶಕ್ತಿಗಳ ಸಂಚಿನಿಂದ ಹುಬ್ಬಳ್ಳಿ ಕುಖ್ಯಾತಿ ಪಡೆಯಬೇಕೆಂದು ಕೆಲವು ಜನ ರಾಜಕೀಯ ಕುತಂತ್ರವನ್ನು ಮಾಡುತ್ತಿದ್ದಾರೆ ಎಂದು ಇದರಿಂದ ನನಗೆ ವ್ಯಕ್ತವಾಗಿದೆ. ನಾನು ಮೊದಲೇ ಹೇಳಿದಂತೆ ಇದರ ಬಗ್ಗೆ ಸರ್ಕಾರ ಸಂಪೂರ್ಣವಾದ ಒಂದು ತನಿಖೆಯನ್ನು ಮಾಡಿಸಿ ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆಹಚ್ಚಬೇಕು. ಪೊಲೀಸರು ಎರಡು ತಾಸು ಕಳೆದರೂ ಪರಿಸ್ಥಿತಿ ಹತೋಟಿಗೆ ಬರದಿದ್ದಾಗ ಒಂದು ಫೈರಿಂಗ್ ಮಾಡಿದ್ದಾರೆ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಹುಬ್ಬಳ್ಳಿ ನಗರ ಸುಟ್ಟು ಹೋಗುತ್ತದೆ ಎಂಬ ಅಂಶ ಸ್ಪಷ್ಟವಾದಾಗ ಪೊಲೀಸರು ಗುಂಡು ಹಾರಿಸಿದ್ದಾರೆ. ಗೋಲಿಬಾರ್ ಮಾಡಿರುವುದರ ಬಗ್ಗೆ ನಾನು ಹೆಚ್ಚಿಗೆ ಏನೂ ಹೇಳಲಾರೆ. ಎರಡು ತಾಸು ನಡೆದ ಈ ಭೀಕರ ಘಟನೆಯಲ್ಲಿ ಪೊಲೀಸ್ ಇಲಾಖೆ ಏನು ವ್ಯವಸ್ಥೆ ಮಾಡಿದೆ ಅದರ ಬಗ್ಗೆ ನನ್ನ ಎರಡನೇ ಮಾತಿಲ್ಲ. ಅವರು ತಮ್ಮನ್ನು ತಾವು ಸಂರಕ್ಷಿಸಿಕೊಳ್ಳಲು ಈ ರೀತಿ ಗುಂಡು ಹಾರಿಸಿದ್ದಾರೆಯೇ ಹೊರತು ಯಾರನ್ನೂ ಕೊಲ್ಲಬೇಕೆಂಬ ಉದ್ದೇಶದಿಂದ ಅಲ್ಲ. ಅವರು ವಿಚ್ಛಿದ್ರಕಾರಕ ಶಕ್ತಿಗಳೊಂದಿಗೆ ಬಹಳವಾಗಿ ಹೋರಾಡಿದ್ದಾರೆ. ಹುಬ್ಬಳ್ಳಿಯ ಶಾಂತಿಯನ್ನು ಕದಡಿರುವ ಈ ಶಕ್ತಿಗಳನ್ನು ಸರ್ಕಾರ ಗುರುತುಹಿಡಿದು ಅವರನ್ನು ಶಿಕ್ಷಿಸಬೇಕೆಂದು ನಾನು ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ. ಜೊತೆಗೆ ಈ ರೀತಿಯ ಘಟನೆಗಳು ಮತ್ತೆ ಮತ್ತೆ ಪುನರಾವರ್ತನೆಗೊಳ್ಳದಂತೆ ಸರ್ಕಾರ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಂ.ಸಿ. ನಾಣಯ್ಯ:(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ:17-3-98ರಂದು ಹುಬ್ಬಳ್ಳಿಯಲ್ಲಿ ರಂಗಪಂಚಮಿ ಹಬ್ಬವನ್ನು ಆಚರಿಸಲಾಗುತ್ತಿತ್ತು. ಈ ಸಂದರ್ಭದಲ್ಲಿ ಹಬ್ಬವನ್ನು ಸುಗಮವಾಗಿ ಆಚರಿಸಲು ಅನುಕೂಲವಾಗುವಂತೆ ಬಿಗಿ ಬಂದೋಬಸ್ತ್ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು. ಸುಮಾರು 2 ಗಂಟೆ ಹೊತ್ತಿಗೆ ಹುಬ್ಬಳ್ಳಿಯ ಎಂ.ಜಿ ಮಾರ್ಕೆಟ್‌ನಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟಿನಿಂದಾಗಿ 24 ಸಣ್ಣ ಪುಟ್ಟ ಗೂಡಾ ಅಂಗಡಿಗಳು ಹಾನಿಗೊಂಡವು. ಇದನ್ನು ಕ.ವಿ.ಮಂ. ಅಧಿಕಾರಿಗಳು ಪರೀಶೀಲಿಸಿ, ಈ ಘಟನೆಯು ವಿದ್ಯುತ್ ಶಾರ್ಟ್ ಸರ್ಕ್ಯೂಟಿನಿಂದಾಗಿಯೇ ನಡೆಯಿತೆಂದು ಧೃಡಪಡಿಸಿರುತ್ತಾರೆ. ಆದರೆ ಮುಸ್ಲಿಂ ಬಾಂದವರಲ್ಲಿ ಇದು ಹಿಂದೂಗಳ ಕುತಂತ್ರದಿಂದಾಗಿ ನಡೆದಿದೆ ಎಂಬ ಸುಳ್ಳು ವದಂತಿ ಹಚ್ಚಿ ಉದ್ರಿಕ್ತ ಪರಿಸ್ಥಿತಿ ಉಂಟಾಯಿತು. ಈ ಬೆಂಕಿ ಅಪಘಾತದ ಬಗ್ಗೆ ಹರಡಿದ್ದ ಸುಳ್ಳು ವದಂತಿ ಬಗ್ಗೆ ಸಾರ್ವಜನಿಕರಿಗೆ ಮನವರಿಕೆ ಮಾಡಲು ವ್ಯಾಪಕ ಪ್ರಚಾರ ಮಾಡಲಾಯಿತು.

ಸುಮಾರು 3-15ರ ಸಮಯದಲ್ಲಿ ತಿಮ್ಮಸಾಗರ ಓಣಿಯ "ಕಾಮಣ್ಣ" ಮೂರ್ತಿಯ ಮೆರವಣಿಗೆಯು ಡಾಕಪ್ಪ ವೃತ್ತದ ಬಳಿಗೆ ಬರುತ್ತಿತ್ತು. ಮೆರವಣಿಗೆಕಾರರು ಮೆರವಣಿಗೆಯನ್ನು ಕೌಲ್‌ಪೇಟೆ ಅಡ್ಡರಸ್ತೆ ಬಳಿ ಇರುವ ಮಸೀದಿವರೆಗೆ ತೆಗೆದುಕೊಂಡು ಹೋಗಲು ಯೋಚಿಸಿ ಈ ಬಗ್ಗೆ ಒತ್ತಾಯಿಸುತ್ತಿದ್ದರು. ಆಂಗ್ಲ ಉರ್ದು ಪ್ರಾಥಮಿಕ ಶಾಲೆಯಲ್ಲಿ ಪರೀಕ್ಷೆಗಳು ನಡೆಯುತ್ತಿರುವುದರಿಂದ ಹಾಗೂ ಸದರಿ ಸ್ಥಳವು ಸೂಕ್ಷ್ಮವಾಗಿದ್ದುದರಿಂದ ಮೆರವಣಿಗೆಯನ್ನು ಅಲ್ಲಿಯೇ ಮುಕ್ತಾಯಗೊಳಿಸುವಂತೆ ಮೆರವಣಿಗೆಕಾರರಿಗೆ ಸಲಹೆ ಮಾಡಲಾಗಿತ್ತು. ಸದರಿ "ಕಾಮಣ್ಣ" ಮೂರ್ತಿಯ ಮೆರವಣಿಗೆಯು ಡಾಕಪ್ಪ ವೃತ್ತದ ಸಮೀಪ ಬಂದಾಗ ಹಿಂದೂ ಹಾಗೂ ಮುಸ್ಲಿಂ ಬಾಂಧವರು ಅದನ್ನು ವೀಕ್ಷಿಸಲು ಅಲ್ಲಿ ಸೇರಿದ್ದರು. ಈ ಪ್ರದೇಶದಲ್ಲಿ ಎರಡೂ ಕೋಮಿನ ಜನಾಂಗದವರು ವಾಸಿಸುತ್ತಿದ್ದು ಮತ್ತು ಮಾರ್ಗವು ತೀರಾ ಇಕ್ಕಟ್ಟಾಗಿತ್ತು.

ಏತನ್ಮಧ್ಯೆ ಮೆರವಣಿಗೆಕಾರರು ಘೋಷಣೆಗಳನ್ನು ಕೂಗಿದಾಗ ನೆರೆದ ಗುಂಪು ಪ್ರತಿ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು. ತಕ್ಷಣವೇ ಮೆರವಣಿಗೆಕಾರರ ಮೇಲೆ ಕಲ್ಲು ತೂರಾಟ ಪ್ರಾರಂಭವಾಯಿತು ಹಾಗೂ ಮೆರವಣಿಗೆಯು ಕೌಲ್‌ಪೇಟೆ ಅಡ್ಡರಸ್ತೆ ಕಡೆಗೆ ಮುಂದುವರೆಯಿತು. ಎರಡೂ ಕಡೆಯವರು ಪರಸ್ಪರ ಕಲ್ಲು ತೂರಾಟ ಹಾಗೂ ಹಿಂಸಾಕೃತ್ಯಗಳಲ್ಲಿ ತೊಡಗಿದಾಗ ಬಂದೋಬಸ್ತ್ ಕರ್ತವ್ಯದ ಮೇಲಿದ್ದ ಪೊಲೀಸರು ಅವರನ್ನು ನಿಯಂತ್ರಿಸಿದರು. ಸದರಿ ವೇಳೆಗೆ ಆಂಗ್ಲ ಉರ್ದು ಶಾಲೆಯ ಮಕ್ಕಳಿಗೆ ಪರೀಕ್ಷೆ ಮುಗಿದಿತ್ತು. ಆ ಶಾಲೆಯ ಮಕ್ಕಳೆಲ್ಲ ಹೆಣ್ಣು ಮಕ್ಕಳಾಗಿದ್ದರಿಂದ ಅವರನ್ನು ಸುರಕ್ಷಿತವಾಗಿ ಹಿಂದಿರುಗಿಸಲು ಪೊಲೀಸರು ಸೂಕ್ತ ವ್ಯವಸ್ಥೆ ಮಾಡಿದ್ದರು.

ಕಲ್ಲು ತೂರಾಟವು ನಿರಂತರವಾಗಿ ನಡೆದಿದ್ದರಿಂದ ಎರಡೂ ಗುಂಪುಗಳ ನಡುವೆ ಸಿಕ್ಕಿಬಿದ್ದಿದ್ದ ಪೊಲೀಸರು ಲಾಠಿಪ್ರಹಾರ ಹಾಗೂ ನಂತರ ಅಶ್ರುವಾಯು .. ಪ್ರಯೋಗ ಮಾಡಿದರು. ಗುಂಪುಗಳು ಕಲ್ಲು ತೂರಾಟ, ಆ್ಯಸಿಡ್ ಬಲ್ಬ್ ಹಾಗೂ ಸೋಡಾ ಬಾಟ್ಲುಗಳನ್ನು ಪೊಲೀಸರ ಮೇಲೆ ಎಸೆಯುವುದನ್ನು ಮುಂದುವರಿಸಿದರು. ಈ ಗಲಭೆಯಲ್ಲಿ 20 ಜನ ಅಧಿಕಾರಿಗಳೂ ಸೇರಿದಂತೆ 75 ಜನ ಪೊಲೀಸ್ ಸಿಬ್ಬಂದಿಯವರು ಗಾಯಗೊಂಡಿರುತ್ತಾರೆ. ಹಾಗೂ 3 ಪೊಲೀಸ್ ವ್ಯಾನ್, 1 ಟೆಂಪೊ, 1 ಆಂಬ್ಯೂಲೆನ್ಸ್ 3 ಜೀಪ್‌ಗಳು ಜಖಂಗೊಂಡಿವೆ.

ಗಲಭೆಯನ್ನು ಹತ್ತಿಕ್ಕಿ ಹಾನಿಯನ್ನು ತಡೆಗಟ್ಟಲು ಸೂಕ್ತ ಎಚ್ಚರಿಕೆ ನೀಡಿದ ನಂತರ ಅನಿವಾರ್ಯವಾಗಿ ಪೊಲೀಸರು ಗೋಲೀಬಾರ್ ಪ್ರಯೋಗ ಮಾಡಿದರು. ಈ ಪೊಲೀಸ್ ಗೋಲೀಬಾರ್‌ನಲ್ಲಿ (1) ಶ್ರೀ ಫರೂಖ್ ಬಿನ್ ವಾಲೀ ಅಹಮ್ಮದ್ ಮುರ್ಗೋಡು (18 ವರ್ಷ) (2) ಶ್ರೀ ಎಜಾಜ್ ಬಿನ್ ಮುಗುತ್ಸಾಬ್ ಬಾಸರಕೋಡ್ (17 ವರ್ಷ) (3) ಮಹಮ್ಮದ್ ಇರ್ಫಾನ್ ಬಿನ್ ಅಬ್ದುಲ್ ಕರೀಂ ಜಮಾದಾರ್ (21 ವರ್ಷ) ಮತ್ತು (4) ಖಾಜಾಸಾಬ್ ಬಿನ್ ಅಬ್ದುಲ್ ಸಾಬ್ ಸಗೀರಿ (52 ವರ್ಷ) ಎಂಬ 4 ಜನರು ಗುಂಡೇಟು ಅನುಭವಿಸಿರುತ್ತಾರೆ. ಇವರುಗಳು ಕೆ.ಎಮ್.ಸಿ. ಆಸ್ಪತ್ರೆ ಹುಬ್ಬಳ್ಳಿ ಇಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ.

ಪೊಲೀಸ್ ಗೋಲಿಬಾರ್ ನಂತರ ಗುಂಪು ಚದುರಿ ಪರಿಸ್ಥಿತಿಯನ್ನು ಸಂಪೂರ್ಣವಾಗಿ ನಿಯಂತ್ರಿಸಲಾಯಿತು. ತಿಮ್ಮಸಾಗರ ಓಣಿಯ ಕಾಮಣ್ಣನ ಮೂರ್ತಿಯನ್ನು ಮೆರವಣಿಗೆಕಾರರು ಮೆರವಣಿಗೆ ನಿಗಧಿಪಡಿಸಿದ ಸಮಯ 6.30 ರಲ್ಲಿ ಸುಟ್ಟು ಹಾಕಿ, ಶಾಂತಿಯುತವಾಗಿ ಮೆರವಣಿಗೆಯನ್ನು ಮುಕ್ತಾಯಗೊಳಿಸಿದ್ದಾರೆ.

ಈ ಘಟನೆ ಸಂಬಂಧ ಹುಬ್ಬಳ್ಳಿ ನಗರದಲ್ಲಿ 5 ಮೊಕದ್ದಮೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಹುಬ್ಬಳ್ಳಿ, ಬೆಳಗಾಂ ಹಾಗೂ ಗದಗನ ಪೊಲೀಸ್ ಸೂಪರಿಂಟೆಂಡ್‌ಗಳೂ ಸೇರಿದಂತೆ ಅನೇಕ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಯನ್ನು ಹುಬ್ಬಳ್ಳಿ ನಗರಕ್ಕೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ನಿಯೋಜಿಸಲಾಗಿದೆ. ಶ್ರೀ ಟಿ. ಮಡಿಯಾಳ್, ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ (ಕಾನೂನು ಮತ್ತು ಸುವ್ಯವಸ್ಥೆ) ಇವರು ಹುಬ್ಬಳ್ಳಿ ನಗರಕ್ಕೆ ತಲುಪಿ ಪರಿಸ್ಥಿತಿಯ ಬಗ್ಗೆ ನಿಗಾ ವಹಿಸಿ ಅಲ್ಲಿಯೇ ವಾಸ್ತವ್ಯ ಹೂಡಿದ್ದಾರೆ. ದಿನಾಂಕ 17-3-98ರ ರಾತ್ರಿ 7 ಘಂಟೆಯಿಂದ ದಿನಾಂಕ 19-3-98ರ ಸಂಜೆ 6 ಘಂಟೆ ತನಕ ಗಲಭೆ ಪೀಡಿತ ಪ್ರವೇಶದಲ್ಲಿ ಕರ್ಫ್ಯೂವನ್ನು ವಿಧಿಸಲಾಗಿದೆ:

ದಿನಾಂಕ 17-3-98ರ ಸಂಜೆ 4 ಘಂಟೆ ಮತ್ತು 6.30 ಘಂಟೆಗಳ ನಡುವಿನ ಅವಧಿಯಲ್ಲಿ ಘಟನೆಗಳು ಬಿಟ್ಟರೆ ಬೇರೆ ಯಾವುದೇ ಅಹಿತಕರ ಘಟನೆಗಳು ಇಲ್ಲಿಯವರೆಗೆ ನಡೆದಿರುವುದಿಲ್ಲ. ಪರಿಸ್ಥಿತಿಯು ಸಂಪೂರ್ಣ ನಿಯಂತ್ರಣದಲ್ಲಿದೆ. ಗಂಭೀರ ಹಾಗೂ ಪರಿಣಾಮಕಾರಿ ಬಂದೋಬಸ್ತ್ ವ್ಯವಸ್ಥೆಯನ್ನು ಹುಬ್ಬಳ್ಳಿ ನಗರದಲ್ಲಿ ಏರ್ಪಡಿಸಲಾಗಿದೆ. ಶ್ರೀ ಟಿ. ಮಡಿಯಾಳ್, ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ (ಕಾನೂನು ಮತ್ತು ಸುವ್ಯವಸ್ಥೆ) ಇವರು ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಬಂದೋಬಸ್ತ್ ವ್ಯವಸ್ಥೆ ಕುರಿತು ಖುದ್ದಾಗಿ ಮೇಲ್ವಿಚಾರಣೆಯ ನೇತೃತ್ವವನ್ನು ವಹಿಸಿದ್ದಾರೆ.

ಮಾನ್ಯ ಸಭಾಧ್ಯಕ್ಷರೆ, ಗಲಭೆಯಲ್ಲಿ ಮೃತರಾದವರು ಮತ್ತು ಗಾಯಗೊಂಡಿರುವವರಿಗೆ ಪರಿಹಾರ ಕೊಡಿಸುವ ಸಲುವಾಗಿ ಕಾನೂನಿನ ಅಡ್ಡಿಯಲ್ಲಿ, ನಿಯಮಗಳಿಗನುಸಾರವಾಗಿ ಕ್ರಮ ಕೈಗೊಳ್ಳುತ್ತಿದ್ದೇವೆ. ಪೊಲೀಸರ ಅಜಾತುರ್ಯದಿಂದ ಈ ಘಟನೆ ನಡೆದಿದೆ ಎಂಬುದು ಒಂದು ಕಡೆಯಾದರೆ ಮತ್ತೆಂದು ಕಡೆ ಅದೇ ಸಂದರ್ಭದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟಿನಿಂದ ಉಂಟಾದ ಬೆಂಕಿ ಆಕಸ್ಮಿಕದ ಬಗ್ಗೆ ಸುಳ್ಳು ವದಂತಿ ಹರಡಿ ಈ ರೀತಿ ಗಲಭೆಯಾಗಿದೆ ಎನ್ನಲಾಗಿದೆ. ಅದೇ ದಿನ ಹುಬ್ಬಳ್ಳಿ ನಗರದಲ್ಲಿ ಎಲ್ಲಾ ವರ್ಗದ ಜನರನ್ನೂ ಒಳಗೊಂಡ ಒಂದು ಶಾಂತಿ ಸಭೆಯನ್ನು ನಡೆಸಲಾಗಿದೆ. ಹೋಳಿ ಹಬ್ಬ ಬಹಳ ಶಾಂತಿಯುತವಾಗಿ ನಡೆಯಬೇಕೆಂಬ ಕಾರಣದಿಂದ ಪೊಲೀಸರು ಸಂಪೂರ್ಣ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು. ಆದರೂ ಅದೇ ಸಂದರ್ಭದಲ್ಲಿ ಆದಂತಹ ವಿದ್ಯುತ್ ಶಾರ್ಟ್ ಸರ್ಕ್ಯೂಟಿನಿಂದಾಗಿ ಬೆಂಕಿ ಹತ್ತಿಕೊಂಡ ಕಾರಣ ಮುಸ್ಲಿಂ ಬಾಂಧವರು ಇದು ಹಿಂದೂಗಳ ಕುತಂತ್ರದಿಂದಾಗಿ ನಡೆದಿದೆ ಎಂಬ ಸುಳ್ಳು ವದಂತಿಯಿಂದಾಗಿ ಉದ್ರಿಕ್ತ ಪರಿಸ್ಥಿತಿ ನಿರ್ಮಾಣವಾಯಿತು. ಪೊಲೀಸರು ಸಾಕಷ್ಟು ಸಂಖ್ಯೆಯಲ್ಲಿದ್ದುದರಿಂದ ಪರಿಸ್ಥಿತಿ ಅಷ್ಟರಮಟ್ಟಿಗೆ ಹತೋಟಿಗೆ ಬಂತು. ಇದು ಒಮ್ಮೆಲೆ ಏಕಾ ಏಕಿಯಾಗಿ ನಡೆದಂತಹ ಘಟನೆಯಾಗಿದೆ. ಈ ಘಟನೆಗೆ ಸಂಬಂಧಪಟ್ಟಂತೆ ಯಾರೂ ತಪ್ಪಿತಸ್ಥರಿದ್ದಾರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಕುರಿತಂತೆ ಒಂದು ಸಮಗ್ರವಾದ ತನಿಖೆ ನಡೆಸಲು ಪೊಲೀಸರು ಕಾರ್ಯೋನ್ಮುಖರಾಗಿದ್ದಾರೆ.

ಬಹುಶಃ ಈಗ ಅಲ್ಲಿ ಶಾಂತಿ ನೆಲೆಸಿದೆ. ಕರ್ಫ್ಯೂ 19ನೇ ತಾರೀಖಿನವರೆಗೆ, ಇವತ್ತಿನವರೆಗೆ ಇದೆ. ಬಹುಶಃ ಈ ಒಂದು ಪರಿಸ್ಥಿತಿಯಲ್ಲಿ ಆ ಹುಬ್ಬಳ್ಳಿ ನಗರದ ಜನತೆಯನ್ನು ಸರ್ಕಾರದ ವತಿಯಿಂದ ನಾವು ಕೂಡ ಕೇಳಿಕೊಳ್ಳುತ್ತಿದ್ದೇವೆ. ಶಾಂತಿ ನೆಲೆಸಬೇಕಾಗಿರುವುದು ನಿಜ. ಆದರೆ ಇಂಥ ಕೆಲವು ಗಲಭೆಗಳು ಅಲ್ಲಿ ಇಲ್ಲಿ ನಡೆಯುತ್ತಿರುವುದು ವಿಷಾದಕರವಾಗಿರತಕ್ಕಂಥ ಘಟನೆ. ಇದರ ಬಗ್ಗೆ ನಾವೆಲ್ಲರೂ ಗಂಭೀರವಾಗಿ ಚಿಂತನೆ ಮಾಡಬೇಕಾಗುವ ಒಂದು ಕಾಲ ಬಂದಿದೆ.

ಎರಡು ವರ್ಷಗಳಿಂದ ಯಾವುದೇ ಅಹಿತಕರಘಟನೆ ನಡೆಯದೇ ಇರುವ ಪ್ರದೇಶದಲ್ಲಿ ಪುನಃ ಈ ಅಹಿತಕರ ಘಟನೆಗಳು ಮರುಕಳುಹಿಸುತ್ತಿರುವುದು. ನಮಗೆಲ್ಲರಿಗೂ ನೋವನ್ನು ತರುವಂಥದ್ದು. ಹಿಂದೂಗಳು, ಮುಸಲ್ಮಾನರು ಎಲ್ಲಾ ವರ್ಗದ ಜನರು ಶಾಂತಿಯಿಂದ ಸಹಬಾಳ್ವೆಯನ್ನು ನಡೆಸಬೇಕಾಗಿರುವ ಸಂದರ್ಭದಲ್ಲಿ ದೇವರನ್ನು ಹೊರಗೆ ಮೆರವಣಿಗೆ ತಂದಿರುವ ಸಂದರ್ಭದಲ್ಲಿ ಈ ಘಟನೆಗಳು ಆಗುತ್ತಿರುವುದು ಬಹುಶಃ ನಾನು ಹೇಳುತ್ತೇನೆ, ಶ್ರೀಮಾನ್ ರೆಡ್ಡಿಯವರು ಹೇಳಿದ ಹಾಗೆ ದೇವರು ಹೊರಗಡೆ ಬಂದಾಗಲೇ ಈ ಗಲಾಟೆಗಳು ನಡೆಯುತ್ತಿರುವುದು ಇದು ನಾವು ಇವತ್ತು ರಾಷ್ಟ್ರದ ಉದ್ದಗಲಕ್ಕೂ ನೋಡುತ್ತಿರುವಂಥದ್ದು. ನಮ್ಮ ಹೃದಯದಲ್ಲಿ ನಾವೆಲ್ಲರೂ ಒಟ್ಟಿಗೆ ಇದ್ದೇವೆ ಎನ್ನುವ ಭಾವನೆ ಬಂದರೆ ಇಂಥದ್ದಕ್ಕೆ ಆಸ್ಪದ ಕೊಡಲಿಕ್ಕಾಗುವುದಿಲ್ಲ. ಮಾನ್ಯ ಕಾಟ್ಟೆರವರು ಹೇಳಿದಂತೆ ವಿಚ್ಛಿದ್ರಕಾರಕ ಶಕ್ತಿಗಳು ಇರುವುದು ನಿಜ. ವಿಚ್ಛಿದ್ರಕಾರಕ ಶಕ್ತಿಗಳು ನಮ್ಮ ಸಮಾಜದಲ್ಲಿದ್ದಾವೆ. ಆ ಸಮಾಜದಲ್ಲಿರುವ ವಿಚ್ಛಿದ್ರಕಾರಕ ಶಕ್ತಿಗಳು ಎಲ್ಲಾ ವರ್ಗದಲ್ಲೂ ಇದ್ದಾರೆ ಎನ್ನುವುದು ನಮಗೂ ನಿಮಗೂ ಎಲ್ಲರಿಗೂ ಗೊತ್ತಿರತಕ್ಕಂಥದ್ದು. ಈ ವಿಚ್ಛಿದ್ರಕಾರಕ ಶಕ್ತಿಗಳು ಯಾವುದೇ ವರ್ಗದಲ್ಲಿರಲಿ, ಯಾರೇ ಇರಲಿ, ಅವರನ್ನು ಹತ್ತಿಕ್ಕಬೇಕಾಗಿರುವ ಈ ಜವಾಬ್ದಾರಿಕೆ ಸರ್ಕಾರದ್ದು: ಅದಕ್ಕಿಂತ ಹೆಚ್ಚಾಗಿ ನಾನು ಹೇಳುತ್ತೇನೆ, ಸಮಾಜದಲ್ಲಿರುವ ಪ್ರತಿಯೊಬ್ಬರ ಜವಾಬ್ದಾರಿಯಾಗಬೇಕು ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಏನೆಂದರೆ ತಾವು ಕಾಂಪೆನ್‌ಸೇಷನ್ ಬಗ್ಗೆ ಏನು ಕಾನೂನು ಪ್ರಕಾರ ನಾವು ಕೊಡುತ್ತೇವೆ ಎಂದಿರಿ. ಇದು ಏನಾಗುತ್ತದೆ ಎಂದರೆ ಇಂಥ ಗಲಭೆಗಳು ನಡೆದಾಗ ನೀವು ಸರ್ಕಾರದವರೇ ನಿರ್ಣಯವನ್ನು ತೆಗೆದುಕೊಂಡು ಕೊಡತಕ್ಕಂಥದ್ದು ಇದೆ. ಏಕೆಂದರೆ ಅದರ ಪ್ರಕಾರ ಹೋದರೆ ಒಂದು ಸಾವಿರ ರೂಪಾಯಿ ಕೂಡ ಯಾರಿಗೂ ಸಿಗುವುದಿಲ್ಲ. ನೀವು ಯಾವ ರೀತಿಯಾಗಿ ಮಡಿಕೇರಿಯಲ್ಲಿ, ಬೇರೆ ಕಡೆ ಮೈಸೂರಿನಲ್ಲಿ ತೆಗೆದುಕೊಂಡಿರಿ, ಹಾಗೆ ಕಾಲ್ಲು ಕೂಡಿ, So many provisions are there ಆಮೇಲೆ ಮುನಿಸಿಪಾಲಿಟಿ ವತಿಯಿಂದ ಅದನ್ನು ಕಟ್ಟಿಸುವಂಥದ್ದು. ಏನು 25 ಷಾಫ್ಸ್‌ಗಳು ಡಿಸ್ಟ್ರಾಯ್ ಆಗಿದೆ, ಅದನ್ನು ಮುನಿಸಿಪಾಲಿಟಿ ವತಿಯಿಂದ ಕನ್‌ಸ್ಟ್ರಕ್ಷನ್ ಮಾಡಿಸತಕ್ಕಂಥದ್ದುಹೂಡಬೇಕು. ಏಕೆಂದರೆ ಏರಿಯಾ ಇರುವುದೇ ಮುನಿಸಿಪಾಲಿಟಿಯಲ್ಲಿ, ಅದಕ್ಕಾಗಿ ಅದನ್ನು ಕೂಡ ಮಾಡಬೇಕಾಗುತ್ತದೆ ಮತ್ತು ಅಂಗಡಿಗಳು ಜಖಂಗೊಂಡವರಿಗೆ ನೀವು ಏನಾದರೂ ಅನೌನ್ಸ್ ಮಾಡಬೇಕು ಇಲ್ಲದಿದ್ದರೆ ಕಾನೂನು ಪ್ರಕಾರ ಕೊಡುತ್ತೇನೆಂದರೆ ಎಷ್ಟು ಏನು ಎಂದು ಹೇಗೆ ಗೊತ್ತಾಗಬೇಕು. ಅದಕ್ಕೆ ದಯವಿಟ್ಟು ಸ್ಪಷ್ಟವಾಗಿ ಹೇಳಿ. ಇಷ್ಟಿಷ್ಟು ಅನೌನ್ಸ್‌ಮೆನ್ಟ್ ನಾವು ಮಾಡಿದ್ದೇವೆ, ಬೇರೆ ಕಡೆ ಏನು ಕೊಟ್ಟಿದ್ದೇವೆ, ಅಷ್ಟು ಹಣ ಇಲ್ಲೂ ಕೊಡುತ್ತೇವೆ ಎಂದೂ ಆಗಬೇಕು ಮತ್ತು ಎರಡನೆಯದು ಏನೆಂದರು ಸ್ಕ್ರಿಪ್ಟ್ ಆಗಿ ಈಗಲಾದರೂ ಕೂಡ ಇನ್ನು ಮುಂದೆ ಇಂಥ ಘಟನೆ ನಡೆಯದ ರೀತಿಯಲ್ಲಿ ಅಲ್ಲಿನ ಪೊಲೀಸ್ ಅಧಿಕಾರಿಗಳಿಗೆ ತಾವು ಹೇಳಬೇಕಾಗುತ್ತದೆ. ಏಕೆಂದರೆ ಈ ಮೆರವಣಿಗೆ ಏನು ಹೋಗುತ್ತಿತ್ತಲ್ಲಾ, ಎಲ್ಲಿ ಹೋಯೀತು? ಇದು ಆಂಗ್ಲೋ ಉರ್ದು ಸ್ಕೂಲು ಎನ್ನುವಂಥದ್ದು ಇಲ್ಲಿ ಯಾವಾಗಲೂ ಜಗಳ ಆಡತಕ್ಕಂಥ ಜಾಗ. ಅಂಥ ಸೆನ್ಸಿಟೀವ್ ಏರಿಯಾದಲ್ಲಿ ಮೆರವಣಿಗೆಯನ್ನು ಅವಾಯ್ಡ್ ಮಾಡತಕ್ಕಂಥದ್ದು ಮಾಡಬೇಕು. ಒಂದು ಕಡೆ ಅವಾಯ್ಡ್ ಮಾಡಲಿಲ್ಲ ಎಂದರೆ ಇದೇ ರೀತಿಯಾಗಿ ಘಟನೆ ನಡೆಯುತ್ತದೆ. ಇವತ್ತು ಫೈರಿಂಗ್ ಆಗಿದ್ದ ಯಾರ ಮೇಲೆ ಆಗಿದೆ? ತಾವು ಹೇಳಿದಿರಿ ಮೆರವಣಿಗೆ

ಹೋಗುವಾಗ ಕೆಲವು ಜನ ಮೆರವಣಿಗೆಕಾರರೇ ಕೂಗಾಟ ನಡೆಸಿದರು. ಆಮೇಲೆ ಅವರೂ ಕೂಗಾಟ ನಡೆಸಿದರು ಎಂದು. ಇದನ್ನು ನಾನು ಬೆಳೆಸಲಿಕ್ಕೆ ಹೋಗುವುದಿಲ್ಲ. ಏಕೆಂದರೆ ಪುನಃ ನಾವು ಬೆಳೆಸಿದರೆ ಒಂದಕ್ಕೊಂದು ಮತ್ತೆ ಬೇರೆ ಟರ್ನ್ ತೆಗೆದುಕೊಳ್ಳುತ್ತದೆ ದಯವಿಟ್ಟು ಯಾರೇ ಇರಲಿ ಈ ಮೆರವಣಿಗೆಕಾರರೇ ಇರಲಿ, ಈ ಮೇರವಣಿಗೆ ಹೋದಮೇಲೆ ಬೇರೆಯವರು ಅದಕ್ಕೆ ಪ್ರತೀಕಾರ ಮಾಡಿ ಅಥವಾ ಕೂಗಿದಂಥ ಜನರೇ ಇರಲಿ, ಯಾರೇ ಇದ್ದರೂ ಕೂಡ ಇದನ್ನು ಅವಾಯ್ಡ್ ಮಾಡುವುದಕ್ಕೆ ಏನು ಎಂದು ಪ್ರಯತ್ನ ಮಾಡಬೇಕೋ, ಇದನ್ನು ಮೊದಲು ಮಾಡಬೇಕು. ಅದಕ್ಕೆ ಎಲ್ಲಿ ಸೆನ್ಸಿಟೀವ್ ಏರಿಯಾಗಳು ಇರುತ್ತವೆ, ಅಲ್ಲಿ ಮೆರವಣಿಗೆಯನ್ನು ಅವಾಯ್ಡ್ ಮಾಡಬೇಕು. ಬೇರೆ ಕಡೆ ಅದನ್ನು ತೆಗೆದುಕೊಂಡು ಹೇಗುವ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ಈ ಜಗಳಗಳು ಖಾಯಂ ಮತ್ತು ನಿಮ್ಮ ಪೊಲೀಸರು ಸಹ ಅದಕ್ಕೆ ಬಲಿಯಾಗುತ್ತಾರೆ ಜನರೂ ಕೂಡ ಬಲಿಯಾಗುತ್ತಾರೆ. ಅದರಲ್ಲಿ ವಿಶೇಷವಾಗಿ ಮುಗ್ಧಜನರು ಬಲಿಯಾಗುತ್ತಾರೆ. ದಯವಿಟ್ಟು ಇದರ ಬಗ್ಗೆ ಪರಿಹಾರದ ಬಗ್ಗೆ ತಾವು ಘೋಷಣೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ:- ಇಂಥ ಪ್ರಕರಣಗಳಲ್ಲಿ ಅಂದರೆ ಅಲ್ಲಿ ಅಂಗಡಿಗಳು ಸುಟ್ಟಿರುವುದು ಈ ಗಲಭೆಯಿಂದಲ್ಲ. ಅಂಗಡಿಗಳು ಸುಟ್ಟು ಹೋಗಿರುವುದು ಶಾರ್ಟ್‌ಸಕ್ಯೂಟಿನಿಂದ. ಬಹುಶಃ ಈ ಮೆರವಣಿಗೆ ಶುರುವಾಗಿದ್ದು ಮಧ್ಯಾಹ್ನದ ಮೇಲೆ. ಆದ್ದರಿಂದ ಮಧ್ಯಾಹ್ನದ ಮೇಲೆ ನಡೆದಿರುವ ಘಟನೆಗೆ ಸಂಬಂಧಪಟ್ಟ ಹಾಗೆ ಬಹುಶಃ ಹಾನಿ ಗೀನಿ ಆಗಿರುವ ಸಂದರ್ಭದಲ್ಲಿ ಅಂಥ ಪ್ರಕರಣಗಳಲ್ಲಿ ಈ ಹಿಂದೆ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ಪರಿಹಾರ ಕೊಡುವ ಸಂದರ್ಭದಲ್ಲಿ. ಅದಕ್ಕನುಗುಣವಾಗಿ ನಾವು ಕ್ರಮವನ್ನು ಕೈಗೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಮತ್ತು ಇಂಥ ಸೂಕ್ಷ್ಮವಾಗಿರುವ ಪ್ರದೇಶಗಳಲ್ಲಿ ಬಹುಶಃ ನಮ್ಮ ಕರ್ನಾಟಕ ರಾಜ್ಯದಲ್ಲಿ ಬೇಕಾದಷ್ಟು ಇಂಥ ಸೂಕ್ಷ್ಮ ಪ್ರದೇಶಗಳು ಇವೆ. ಮುನ್ನೆಚ್ಚರಿಕೆಯನ್ನು ವಹಿಸಿದ್ದಾರೆ, ವಹಿಸಿಲ್ಲವೆಂತಲ್ಲ, ಮತ್ತು ಪೊಲೀಸ್‌ನವರು ಆ ಭಾಗದಲ್ಲಿ ನೀವು ಮೆರವಣಿಗೆ ಹೋಗಬಾರದು ಎಂದೂ ಕೂಡ ಅಲ್ಲಿ ಹೇಳಿದ್ದಾರೆ. ನೀವು ಅಲ್ಲಿಗೇ ಮೆರವಣಿಗೆಯನ್ನು ನಿಲ್ಲಿಸಬೇಕೆಂದು ನಡೆದಿದೆ. ಏಕಾಏಕಿಯಾಗಿ ದೊಡ್ಡ ಮೆರವಣಿಗೆ ಇರುವ ಸಂದರ್ಭದಲ್ಲಿ ಕೆಲವು ಸಂದರ್ಭಗಳಲ್ಲಿ ಇಂಥ ಅಚಾತುರ್ಯಗಳಾಗತಕ್ಕಂಥದ್ದು ಬಹುಶಃ ಇದು ಉದ್ದೇಶಪೂರ್ವಕವೋ, ಉದ್ದೇಶಪೂರ್ವಕವಲ್ಲವೋ ಎಂದು ಹೇಳಲು ನಾನು ಇಷ್ಟಪಡುವುದಿಲ್ಲ. ಅದಕ್ಕೆ ಸಂಬಂಧಪಟ್ಟಹಾಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳುತ್ತದೆ ಎನ್ನುವ ಮಾತನ್ನೂ ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಈಗ ಎಕ್ಸ್‌ಪ್ಲೊಸೀವ್‌ಗೆ ಸಂಬಂಧಪಟ್ಟಹಾಗೆ ಮಾನ್ಯ ವಾಟಾಳ್‌ನಾಗರಾಜ್‌ರವರು ಪ್ರಸ್ತಾಪಮಾಡಿದ್ದಾರೆ. ಪತ್ರಿಕೆಯಲ್ಲಿ ಆರು ಜನರು ಸತ್ತಿದ್ದಾರೆಂದು ಬಂದಿದೆ. ಅದಕ್ಕೆ ಸಂಬಂಧಪಟ್ಟ ಹಾಗೆ ನಮ್ಮವರದಿ ಈಗ ತನಿಖೆಯ ಹಂತದಲ್ಲಿದೆ ಮತ್ತು ಈ ತನಿಖೆಯ ಹಂತದಲ್ಲಿ ನಮಗೆ ಸಿಕ್ಕಿರುವ ಎಂದು ಮಾಹಿತಿ ಯಾವುದು ಇದೆ, ಆ ಮಾಹಿತಿಯನ್ನು ತಮ್ಮ ಮುಂದೆ ಮಂಡಿಸುವುದಕ್ಕೆ ನಾನು ನಿಂತಿದ್ದೇನೆ. ಇದು ಇಂಗ್ಲೀಷ್‌ನಲ್ಲಿ ಬರೆದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಕನ್ನಡದಲ್ಲಿ ಹೇಳಿ.

ಶ್ರೀ ಎಂ.ಸಿ. ನಾಣಯ್ಯ:- ಕನ್ನಡದಲ್ಲಿ ಹೇಳುತ್ತೇನೆ. 18-3-98ರಂದು 4 ಗಂಟೆಯ ಸಮಯಕ್ಕೆ ಒಂದು ಅಕ್ಸಿಡೆಂಟ್ ಎಕ್ಸ್‌ಪ್ಲೋಷನ್ ಅಬ್ರಹಾಂ ಎನ್ನುವವರ ಮನೆಯ ಮುಂದೆ

ನಡೆಯಿತು. ಜಿಲೆಟಿನ್ ಆ್ಯಕ್ಸಿಡೆಂಟ್ ಎಕ್ಸ್‌ಪ್ಲೋಷನ್. ಇದರಲ್ಲಿ ಅಬ್ರಹಾಂ 45 ವರ್ಷ ಇರುವವನು, ಫಾತಿಮಾ ಅವನ ಹೆಂಡತಿ 40 ವರ್ಷ, ಅವನ ಮದರ್ ಇನ್ ಲಾ ಮರಿಯಮ್ಮ 80 ವರ್ಷ, ನೆವ್ಯೂ ಪ್ರವೀಣ್ 11 ವರ್ಷ, ಮುನಿಯಪ್ಪ 25 ವರ್ಷ, ಅಶೋಕ್ 35 ವರ್ಷ ಮತ್ತು ಆ ಒಂದು ಡ್ರೈವರ್ ಆಫ್ ದಿ ವೆಹಿಕಲ್ ಅವರೆಲ್ಲರೂ ಆ ಸ್ಥಳದಲ್ಲೇ ಸತ್ತಿದ್ದಾರೆ. ಬಾಕಿ ಇರುವ 4 ಜನರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಮತ್ತೆ ಅಬ್ರಹಾಂರವರ ಮನೆ ಸಂಪೂರ್ಣವಾಗಿ ಅದು ಡ್ಯಾಮೇಜ್ ಆಗಿದೆ. ನೂರು ಅಡಿ ದೂರದವರೆಗೆ ಆ ಬ್ಲಾಸ್ಟ್ ಎಕ್ಸ್‌ಪ್ಲೋಷನ್ ಯಾವುದು ಇದೆ, ಅಷ್ಟು ವಿಸ್ತಾರವಾಗಿ ಹರಡಿದೆ. ಇದೇನಾಗಿದೆ ಎಂದರೆ ರಾಜೇಶ್ ಮತ್ತು ಅಶೋಕ್ ಎನ್ನುವವರು ಒಂದು ಮಾರುತಿ ವ್ಯಾನ್ ಕ್ಎ-04 ಪಿ 2736 ಅದರಲ್ಲಿ ಡಿಟೋನೇಟರ್ಸ್ ಇದೆ. ಅಲ್ಲಿ ಕ್ವಾರಿ ಮಾಡುವ ಸಂದರ್ಭದಲ್ಲಿ ಇದನ್ನು ಕೊಡಬೇಕೆಂದು ತರುತ್ತಿದ್ದರು ಎಂದು ಪತ್ರಿಕೆಯಲ್ಲಿ ಹೇಳುತ್ತಾರೆ. ಆ ಡಿಟೋನೇಟರ್ಸ್ ಯಾವುದು ಇದೆ, ಅದನ್ನು ಮತ್ತು ಡಿಟೋನೇಟರ್ಸ್ ಇದೆಯಲ್ಲಾ, ಅದನ್ನು ಅವರು ಅನ್‌ಲೋಡ್ ಮಾಡುತ್ತಿದ್ದರು ಅವರ ಮನೆಯ ಎದುರುಗಡೆಯಲ್ಲಿ. ಆ ಸಂದರ್ಭದಲ್ಲಿ ಜಿಲೆಟಿನ್ ಸ್ಟಿಕ್ಸ್ ಮತ್ತು ಡಿಟೋನೇಟರ್ಸ್ ಆ ವ್ಯಾನ್‌ನ ಒಳಗಡೆ ಸಿಕ್ಕಿರತಕ್ಕಂಥದ್ದು. ಅಬ್ರಹಾಂ ಎನ್ನುವವರು ಒಂದು ನ್ಯಾಯಬೆಲೆ ಅಂಗಡಿಯನ್ನು ನಡೆಸುತ್ತಿದ್ದಾರೆ. ಮತ್ತು ಅವರು ಗಿಲಿಟಿನ್ ಮತ್ತು ಡಿಟೊನೇಟರ್ಸ್ ಕೊಡುವ ಕೆಲಸವನ್ನು ಅವರು ಮಾಡುತ್ತಿದ್ದಾರೆಂದು ಹೇಳಿ ತನಿಖೆಯಲ್ಲಿ ಸ್ವಲ್ಪಮಟ್ಟಿಗೆ ಬೆಳಕಿಗೆ ಬಂದಿದೆ. ಅಬ್ರಹಾಂ ಎನ್ನುವವರು ಎರಡು ಹೆಣ್ಣುಮಕ್ಕಳನ್ನು and a son who were away attending to school when the incident occurred. ಅವರು ಎರಡು ಹೆಣ್ಣುಮಕ್ಕಳು ಆ ಸಂದರ್ಭದಲ್ಲಿ ಇರಲಿಲ್ಲ. ಈ ಸಂದರ್ಭದಲ್ಲಿ ಹೊಬ್ಬಗೋಡಿ ಪೊಲೀಸ್ ಸ್ಟೇಷನ್‌ನಲ್ಲಿ ಕ್ರೈಮ್ ನಂಬರ್ 70:98 ರಲ್ಲಿ 337,338 ಐಪಿಸಿ ಯಲ್ಲಿ ಒಂದು ಮೊಕದ್ದಮೆಯನ್ನು ದಾಖಲು ಮಾಡಿದ್ದಾರೆ. ಮತ್ತು ಜಯಶೀಲರೆಡ್ಡಿ ಎಂದು ಹೇಳುವ 60 ವರ್ಷ, ಇವರು ಕೋರಮಂಗಲದಲ್ಲಿದ್ದಾರೆ. ಅವರನ್ನು ಪೊಲೀಸರು ಈಗಾಗಲೇ ತನಿಖೆ ಮಾಡಿದ್ದಾರೆ. ಅವರಿಗೆ ಲೈಸೆನ್ಸ್ ಇದೆ. ಈ ರೀತಿಯ ಎಕ್ಸ್‌ಪ್ಲೋಸೀವ್‌ನ್ನು ಮಾಡಲಿಕ್ಕೆ ಇರುವ ಲೈಸೆನ್ಸ್ ಅವರ ಕೈಯಲ್ಲಿದೆ. ಅವರನ್ನು ಕೂಡ ಈ ಪೊಲೀಸ್‌ನವರು ಕರೆದು ಬಹುಶಃ ಇವರೆಲ್ಲಾದರೂ ಕೊಟ್ಟಿದ್ದಾರೆಯೇ ಎಂದು ಹೇಳುವ ಮಾಹಿತಿಯ ಬಗ್ಗೆ ಅದನ್ನು ಕೂಡ ವಿಚಾರಿಸುತ್ತಿದ್ದಾರೆ. ಮತ್ತು ಈ ವಿಚಾರಣೆಯ ಸಂದರ್ಭದಲ್ಲಿ ಅವರು ಎಕ್ಸ್‌ಪ್ಲೋಸೀವ್‌ನ್ನು ಮಾರಾಟ ಮಾಡುತ್ತಿಲ್ಲ. ಆದರೆ ಅವರಿಗೆ ಸಂಬಂಧಪಟ್ಟಿರುವ ಅವರ ಅಸೋಸಿಯೇಟ್ಸ್ ಯಾರು ಇದ್ದಾರೆ, ಅಮ್ಮೋಜಿರಾವ್ ಚವಾಣ್, ವಾಸು ಮತ್ತು ಪ್ರಕಾಶ್ ಕಬ್ಬನ್ ಪೇಟೆಯಲ್ಲಿರುವವರು. ಇವರು ಈ ಎಕ್ಸ್‌ಪ್ಲೋಸೀವ್‌ನ್ನು ಮಾರಾಟ ಮಾಡಿದ್ದಾರೆ ಎಂದು ಹೋಳಿ ತನಿಖೆಯಲ್ಲಿ ಕಂಡು ಬಂದಿದೆ. ಆದ್ದರಿಂದ ಇದರ ಬಗ್ಗೆ ತನಿಖೆ ಮುಂದುವರಿಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ಇದರಲ್ಲಿ ಯಾರದಾದರೂ ಕೈವಾಡ ಇದೆಯೇ?

ಅಧ್ಯಕ್ಷರು:- ಇನ್ನು ವಿಚಾರಣೆ ಮಾಡುತ್ತಿದ್ದಾರೆ. ಒಂದೇ ದಿವಸದಲ್ಲಿ ಹೇಗೆ ಗೊತ್ತಾಗುತ್ತದೆ?

ಶ್ರೀ ಎಂ.ಸಿ. ನಾಣಯ್ಯ:- ವಿಚಾರಣೆ ಮಾಡಿದ ಮೇಲೆ ಏನಾದರೂ ಕೈವಾಡ ಇದ್ದರೆ ನಿಮಗೆ ಅದನ್ನು ತಿಳಿಸುತ್ತೇವೆ.